**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಓ.ಎಸ್. ನಂ. 07/2022**

**ಡಿಡಬ್ಲ್ಯೂ – 1**

**ಸಾಕ್ಷಿಯು ದಿಃ 03.06.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ ಪಿ.ಎಸ್.ಜಿ ವಕೀಲರಿಂದ**

ವಾದಿಯ ತಂದೆ ಶಿವಬಸಪ್ಪ ರವರ ತಂದೆಯ ಹೆಸರು ಸೊತ್ತಮಾದಪ್ಪ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ ಸೋಮಪ್ಪ ಒಂದೇ ಗ್ರಾಮದಲ್ಲಿ ವಾಸ ಇದ್ದೇವೆ ಎಂದರೆ ಸರಿ. ನನ್ನ ತಂದೆ ಗುರುಮಲ್ಲಪ್ಪ ರವರ ತಂದೆಯ ಹೆಸರು ಶಿವಪ್ಪ ಆಗಿರುತ್ತದೆ, ಆದರೆ ನನ್ನ ತಂದೆ ಗುರುಮಲ್ಲಪ್ಪರವರನ್ನು ದತ್ತು ಪಡೆದಿದ್ದವರ ಹೆಸರು ಚಿಕ್ಕನಂಜಪ್ಪ ಆಗಿರುತ್ತದೆ. ಸೊತ್ತಮಾದಪ್ಪನ ಸ್ವಂತ ಅಣ್ಣನೇ ಸದರಿ ಚಿಕ್ಕನಂಜಪ್ಪ ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದ ಸರ್ವೇ ನಂಬರ್ 51 ರಲ್ಲಿ 1 ಎಕರೆ 33 ಗುಂಟೆ ಆಸ್ತಿ ಇರುತ್ತದೆ. ಸರ್ವೇ ನಂಬರ್ 51ರ ಪಶ್ಚಿಮಕ್ಕೆ ಸರ್ವೇ ನಂಬರ್ 53 ಇರುತ್ತದೆ ಎಂದರೆ ಸರಿ. ದೊಡ್ಡಹುಂಡಿಯಿಂದ ಚೆನ್ನಒಡಯನಪುರಕ್ಕೆ ಹೋಗುವ ರಸ್ತೆ ಪೂರ್ವ ದಿಂದ ಹೊರಟು ಪಶ್ಚಿಮಕ್ಕೆ ಹಾದುಹೋಗಿ ಸರ್ವೇ ನಂಬರ್ 55 ರಲ್ಲಿ ಎಡಕ್ಕೆ ತಿರುಗುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿಯೇ ನಾನು ಮತ್ತು ವಾದಿಯು ನಮ್ಮಗಳ ಜಮಿನಿಗೆ ತಿರುಗಾಡುತ್ತಿದ್ದೇವೆ ಎಂದರೆ ಸುಳ್ಳು. ಸದರಿ ರಸ್ತೆಯು ಸರ್ವೇ ನಂಬರ್ 53ರ ಪಶ್ಚಿಮದಲ್ಲಿ ಹಾದುಹೋಗಿದೆ ಎಂದರೆ ಸರಿ. ಸರ್ವೇ ನಂಬರ್ 53ರ ದಕ್ಷಿಣ ದಿಕ್ಕಿನಲ್ಲಿ ಪೂರ್ವ ಪಶ್ಚಿಮವಾಗಿ ಸರ್ಕಾರಿ ದಾರಿ ಇದೆ ಎಂದರೆ ಸರಿಯಲ್ಲ. ಸದರಿ ದಾರಿಯ ಬಗ್ಗೆ ನಕಾಶೆಯಲ್ಲಿ ನಮೂದಿದೆ ಎಂದರೆ ಸಾಕ್ಷಿಯು ಅಲ್ಲಿ ನೀರು ಹರಿಯುವ ಹಳ್ಳ ಇದೆ ರಸ್ತೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 53ರ ದಕ್ಷಿಣ ದಿಕ್ಕಿನಲ್ಲಿ ಪೂರ್ವ ಪಶ್ಚಿಮವಾಗಿ ಇರುವ ಸರ್ಕಾರಿ ದಾರಿಯಲ್ಲಿ ನೀವು ಓಡಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು, ಹೌದು ಸದರಿ ರಸ್ತೆ ನಮ್ಮ ಜಮೀನಿಗೆ ಕೊನೆಯಾಗುತ್ತದೆ ಎಂದು ನುಡಿಯುತ್ತಾರೆ. ವಾದಿಯು ಸದರಿ ಸರ್ವೇ ನಂಬರ್ 53ರ ದಕ್ಷಿಣ ದಿಕ್ಕಿನಲ್ಲಿ ಪೂರ್ವ ಪಶ್ಚಿಮವಾಗಿರುವ ಸರ್ಕಾರಿ ದಾರಿಯಲ್ಲಿ ಬಂದು

ನಮಗೆ ಸೇರಿದ ಸರ್ವೇ ನಂಬರ್ 51 ರ ದಕ್ಷಿಣ ಭಾಗದಲ್ಲಿ ಪೂರ್ವ ಪಶ್ಚಿಮವಾಗಿರುವ ರಸ್ತೆಯಲ್ಲಿ ಹಾದು ಅವರ ಜಮೀನಿಗೆ ಹೋಗುತ್ತಾರೆ ಎಂದರೆ ಸುಳ್ಳು .

ಸರ್ವೇ ನಂಬರ್ 39 ರ ಜಮೀನು ಶಿವಸ್ವಾಮಿ, ಕಾರ್ತಿಕ್ ಮತ್ತು ಚಿಕ್ಕಮಹದೇವಪ್ಪ ರವರ ಹೆಸರಿನಲ್ಲಿ ಇದೆ. ನನ್ನ ಸಾಕ್ಷಿ ಪ್ರಮಾಣಪತ್ರ ಮತ್ತು ಪ್ರತಿವಾದ ಪತ್ರದಲ್ಲಿ ತಿಳಿಸಿರುವಂತೆ ಸರ್ವೇ ನಂಬರ್ 39ರ ಜಮೀನಿನಲ್ಲಿ ದಾರಿ ಇದೆ ಮತ್ತು ಅದರಲ್ಲಿ ವಾದಿಯು ಅವರ ಜಮೀನಿಗೆ ಹಾದುಹೋಗುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯು ಅವರ ಜಮೀನಿಗೆ ಹಾದುಹೋಗಲು ಸರ್ವೇ ನಂಬರ್ 39 ರಲ್ಲಿ ನಾನು ಹೇಳುವಂತೆ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಸರ್ವೇ ನಂಬರ್ 49 ರಲ್ಲಿ ನೀರು ಹರಿಯುವ ಹಳ್ಳ ಇದ್ದು ಅದರ ಮೂಲಕ ವಾದಿಯು ಅವರ ಜಮೀನಿಗೆ ಹಾದು ಹೋಗುತ್ತಿದ್ದಾರೆ ಎಂದು ತಿಳಿಸಿದ್ದು, ಸದರಿ ಹಳ್ಳ ಮತ್ತು ವಾದಿಯ ಜಮೀನಿನ ನಡುವೆ ನನಗೆ ಸೇರಿದ ಸರ್ವೇ ನಂಬರ್ 51 ಮತ್ತು 52 ರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಿಡಿ-7 ನಕಾಶೆಯ ಪ್ರಕಾರ ಸರ್ವೇ ನಂಬರ್ 49 ರಲ್ಲಿ ಹೇಳಿರುವ ನೀರಿನ ಹಳ್ಳ ಮತ್ತು ಸರ್ವೇ ನಂಬರ್ 39 ರಲ್ಲಿ ಹೇಳಿರುವ ದಾರಿ ವಾದಿಯ ಜಮೀನಿಗೆ ಸಂಪರ್ಕ ಕಲ್ಪಿಸುವುದಿಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ನಲ್ಲಿ ತೋರಿಸಿರುವ ನನಗೆ ಸೇರಿದ ಸರ್ವೇ ನಂಬರ್ 51 ಮತ್ತು 52 ರ ದಕ್ಷಿಣ ಭಾಗದಲ್ಲಿ 12 ಅಡಿ ಅಗಲ ಮತ್ತು ಸುಮಾರು 500 ಅಡಿ ಉದ್ದ ವಿಸ್ತೀರ್ಣದಲ್ಲಿ ಪೂರ್ವ ಪಶ್ಚಿಮವಾಗಿ ಅಸ್ತಿತ್ವದಲ್ಲಿರುವ ದಾರಿಯಲ್ಲಿ ವಾದಿಯು ಸುಮಾರು ಅವರ ತಾತನ ಕಾಲದಿಂದಲೂ ತಮ್ಮ ಜಮೀನಿಗೆ ಓಡಾಡುತ್ತಿದ್ದಾರೆ ಎಂದರೆ ಸುಳ್ಳು. ಸೊತ್ತಮಾದಪ್ಪ ಮತ್ತು ಚಿಕ್ಕನಂಜಪ್ಪ ಅಣ್ಣ ತಮ್ಮಂದಿರಾಗಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ 51ರಲ್ಲಿ 1 ಎಕರೆ 33 ಗುಂಟೆ ಜಮೀನು ನನ್ನ ತಂದೆಗೆ ಚಿಕ್ಕನಂಜಪ್ಪ ರವರಿಂದ ಬಂದಿರುತ್ತದೆ ಎಂದರೆ ಸರಿ. ದಾವ ಆಸ್ತಿಯಲ್ಲಿರುವ ರಸ್ತೆಗೆ ನಾವು ದಿಃ 05.12.2021 ರಂದು ವಾದಿಯು ಉಪಯೋಗಿಸದಂತೆ ಅಡ್ಡಿ ಪಡಿಸಿರುತ್ತೇವೆ ಮತ್ತು ತದನಂತರದಲ್ಲಿಯೂ ಪದೇ ಪದೇ ವಾದಿಯು ದಾವಾ ಆಸ್ತಿ ರಸ್ತೆಯನ್ನು ಉಪಯೋಗಿಸದಂತೆ ಅಡ್ಡಿಪಡಿಸಿರುತ್ತೇವೆ ಎಂದರೆ ಸುಳ್ಳು. ವಾದಿಗೆ ಸೇರಿದ ಸರ್ವೇ ನಂಬರ್ 50/3 ರಲ್ಲಿ 1 ಎಕರೆ 20 ಗುಂಟೆ ಮತ್ತು ಸರ್ವೇ ನಂಬರ್ 50/4 ರಲ್ಲಿ 35 ಗುಂಟೆ ಜಮೀನಿಗೆ ದಾವಾ ಆಸ್ತಿ ರಸ್ತೆಯನ್ನು ಹೊರತು

ಪಡಿಸಿ ಬೇರೆ ರಸ್ತೆ ಇರುವುದಿಲ್ಲ ಎಂದರೆ ಸುಳ್ಳು. ದಾವ ಆಸ್ತಿಯ ರಸ್ತೆಯ ಮೇಲೆ ವಾದಿಗೆ ಅನುಭೋಗದ ಹಕ್ಕು ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ